<u>ಸಾಕ್ಷಿಯನ್ನು ದಿನಾಂಕಃ 01-04-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>

**ಪಾಟೀಸವಾಲುಃ ತೀರ್ಪುಋಣಿ ಪರ ವಕೀಲರಿಂದ**

1. ನಾನು ಅರ್ಜಿ ಸಲ್ಲಿಸುವ ಮೊದಲು ನನ್ನ ಸಹೋದಾರಾದ ಬಸವರಾಜಪ್ಪ ಈ ಅಮಲುಜಾರಿ ಅರ್ಜಿಗೆ ಆಕ್ಷೇಪಣ ಅರ್ಜಿ ಸಲ್ಲಿಸಿದ್ದರು ಅಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿ ವಜಾ ಆದ ಕಾರಣ ನಾನು ಈ ಅರ್ಜಿಯನ್ನು ಹಾಕಿದ್ದೇನೆ ಅಂದರೆ ಸರಿಯಲ್ಲ. ಸರ್ವೆ ನಂ 64/ಎ ಇದರ ಒಟ್ಟು ವಿಸ್ತೀರ್ಣ 3 ಎಕರೆ 16 ಸೆಂಟ್ಸ ಇರುವುದು. ಅದರ ಒಟ್ಟು ವಿಸ್ತೀರ್ಣ 6 ಎಕರೆ 32 ಸೆಂಟ್ಸ ಇರುವುದು ಅಂದರೆ ಸಾಕ್ಷಿಯು ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಮುಂದುವರೆದು 3 ಎಕರೆ 16 ಸೆಂಟ್ಸನ್ನು ನನ್ನ ತಂದೆ ಖರೀದಿ ಮಾಡಿದ್ದರು ಎಂದು ನುಡಿದರು. ಸಾಕ್ಷಿಗೆ ಪುನಃ ವಕೀಲರು ನಿಮ್ಮ ತಂದೆ ಖರೀದಿ ಮಾಡಿದ ಜಾಗದ ವಿಸ್ತೀರ್ಣ ಎಷ್ಟು ಎಂದು ಕೇಳಿದ್ದು ಸಾಕ್ಷಿಯು ನನ್ನ ತಂದೆ 25 ಸೆಂಟ್ಸನ್ನು ಖರೀದಿ ಮಾಡಿರುವರು ಎಂದು ನುಡಿದರು. ಖರೀದಿಗೆ ಸಂಬಂದಿಸಿಂತೆ ನಾನು ಹಾಜರು ಪಡಿಸಿದ ಖರೀದಿ ಪತ್ರದಲ್ಲಿ ಚೆಕ್ಕು ಬಂದಿಗಳನ್ನು ಕಾಣಿಸಲಾಗಿದೆ.

2. ನನಗೆ ದಿಕ್ಕುಗಳನ್ನು ಹೇಳಲು ಗೊತ್ತಾಗುವುದಿಲ್ಲ. ನಾನು ಖರೀದಿ ಮಾಡಿದ ಅಸ್ತಿಯ ***ಪೂರ್ವಕ್ಕೆ*** ನಿಂಗಮ್ಮನ ಕಣ, ***ಪಶ್ಚಿಮಕ್ಕೆ*** ಕೆಂಚಮ್ಮನ ಕಣ, ಹೊಳೆ ದಿಕ್ಕಿಗೆ ಅಂದರೆ ***ಉತ್ತರಕ್ಕೆ*** ಭರಮಪ್ಪನ ಹೊಲ ಹಾಗೂ ***ದಕ್ಷಿಣ*** ದಿಕ್ಕಿಗೆ ದಾರಿ ಇರುವುದು.

3. ಸಣ್ಣ ಹನುಮಂತಪ್ಪನು ಭರಮಪ್ಪನಿಗೆ ಸಂಬಂದದಲ್ಲಿ ಮಗ ಆಗಬೇಕು. 6 ಎಕರೆ 32 ಸೆಂಟ್ಸ ಪೈಕಿ ನನ್ನ ತಂದೆ ಖರೀದಿ ಮಾಡಿದ್ದೇನೆ ಎಂದು ಹೇಳಲಾದ 25 ಸೆಂಟ್ಸ ಜಮೀನು ರಸ್ತೆಯ ಕಡೆ ಇರುವುದು. ನನ್ನ ತಂದೆಗೆ ಕ್ರಯಕ್ಕೆ ಕೊಟ್ಟಂತೆ ಭರಮಪ್ಪ

ಉಳಿದವರಿಗೆ ಜಮೀನು ಕ್ರಯಕ್ಕೆ ಕೊಟ್ಟಿರುವರು ಅಂದರೆ ಸರಿ. ಭರಮಪ್ಪನು ನನಗೆ ಹಾಗೂ ಇತರರಿಗೆ ತನ್ನ ಹೆಸರಿನಲ್ಲಿದ್ದ 6 ಎಕರೆ 32 ಸೆನ್ಸನ್ನು ಮಾರಾಟ ಮಾಡಿದ ನಂತರ ಆತನ ಹೆಸರಿನಲ್ಲಿ 3 ಎಕರೆ 16 ಸೆನ್ಸನ್ನು ಉಳಿಸಿಕೊಂಡನು ಅಂದರೆ ಸರಿ. ಭರಮಪ್ಪ ಸತ್ತ ನಂತರ 3 ಎಕರೆ 16 ಸೆನ್ಸ ಜಮೀನನ್ನು ಆತನ ಮಗನಾದ ಸಣ್ಣ ಹನುಮಂತಪ್ಪನು ತನ್ನ ಹೆಸರಿಗೆ ವರ್ಗಾಯಿಸಿಕೊಂಡನು ಅಂದರೆ ಸರಿ.

4. ಸದರಿ 3 ಎಕರೆ 16 ಸೆನ್ಸ ಜಮೀನನ್ನು ಸಣ್ಣ ಹನುಮಂತಪ್ಪನು ಡಿಕ್ರಿದಾರರಿಗೆ ಕ್ರಯ ಕರಾರು ಪತ್ರವನ್ನು ಮಾಡಿಕೊಟ್ಟಿರುವನು ಅಂದರೆ ಸರಿ. ನನ್ನ ತಂದೆ ಖರೀದಿ ಮಾಡಿದ 25 ಸೆನ್ಸ ಜಮೀನಿಗೆ ಸಂಬಂದಿಸಿದಂತೆ ನಾನು ಹದ್ದು ಬಸ್ತು ಮಾಡಿಸಿದ್ದೇನೆ. ಅದಕ್ಕೆ ಸಂಬಂದಿಸಿದಂತೆ ಸ್ಕೆಚ್ಚ ಮತ್ತು ಸರ್ವೆ ವರದಿಯನ್ನು ಹಾಜರು ಪಡಿಸಿರುತ್ತೇನೆ. ಆ ರೀತಿ ಯಾವುದೇ ದಾಖಲೆಗಳನ್ನು ನಾನು ಹಾಜರು ಪಡಿಸಿರುವುದಿಲ್ಲ ಅಂದರೆ ಸರಿಯಲ್ಲ. ಈ ಕೇಸು ಹಾಕಿದಾಗಿನಿಂದ ನಾವು ಬೇರೆಯವರ ಮಾತನ್ನು ಕೇಳಿಕೊಂಡು ಸುಳ್ಳು ಅರ್ಜಿಗಳನ್ನು ಹಾಕುತ್ತಾ ಬಂದಿದ್ದೇವೆ ಅಂದರೆ ಸರಿಯಲ್ಲ. ನನ್ನ 25 ಸೆನ್ಸ ಅಸ್ತಿಗೂ ಸಣ್ಣ ಹನುಮಂತಪ್ಪ ಡಿಕ್ರಿದಾರರಿಗೆ ಬರೆದುಕೊಟ್ಟಿರುವ ಅಸ್ತಿಗೂ ಯಾವುದೇ ಸಂಬಂದ ಇರುವುದಿಲ್ಲ ಅಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**